## ಕಳೆದ ಸಂಚಿಕೆಯಲ್ಲಿ...

ಮಲ್ಲೂರಿನಲ್ಲಿ ಹೋಟೆಲ್ ಇಟ್ಟುಕೊಂಡಿದ್ದ ದೇವಪ್ಪ ಒಮ್ಮೆ ಮಾಯಕ್ಕನ ಊರಾದ ಎಕ್ಕೇರಿಗೆ ಅಡುಗೆ ಮಾಡಲು ಬಂದಾಗ ಮಾಯಕ್ಕನಿಗೆ ಪರಿಚಯವಾಗಿ, ಸ್ನೇಹವಾಗಿ ಮದುವೆಯೂ ಆಗುತ್ತಾಳೆ. ಆದರೆ ಊರವರೆಲ್ಲ ಈಕೆಯನ್ನು ಓಡಿಹೋದವಳು ಎನ್ನಲಾರಂಭಿಸುತ್ತಾರೆ. ಮಂದಿ ಬಾಯಿಗೆ ಸೊಪ್ಪು ಹಾಕದ ಮಾಯಕ್ಕ ತನ್ನ ಕರ್ತವ್ಯನಿಷ್ಠೆಯಿಂದ ಬಹಳ ಪರಿಶ್ರಮಪಟ್ಟು ಕೆಲಸ ಮಾಡುತ್ತಾಳೆ. ಊರಲ್ಲಿ ನೀರಿನ ಅಭಾವ ಬಂದಾಗ ಸೊಂಟದ ಮೇಲೆ, ತಲೆಯ ಮೇಲೆಲ್ಲ ಬಿಂದಿಗೆ ಹೊತ್ತು ನೀರು ತರುತ್ತಾಳೆ. ಪಂಚಾಯತಿ ಎಲೆಕ್ಷನ್‌ಗೆ ನಿಂತು ಅಧ್ಯಕ್ಷೆಯಾಗಿಯೂ ಆಯ್ಕೆಯಾಗಿ ಊರ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತಾಳೆ. ಊರಿಗೆ ಬರಗಾಲದ ಛಾಯೆ ಆವರಿಸಿದಾಗ ಊರತಾಯಿ ದ್ಯಾಮವ್ವಳನ್ನು ಭಕ್ತಿಯಿಂದ ನೆನೆಯುತ್ತಾಳೆ. ದೇವಸ್ಥಾನದಲ್ಲಿ ಮಳೆಗಾಗಿ ಮಾಯಕ್ಕ ಪ್ರಾರ್ಥನೆ ಮಾಡುತ್ತಿದ್ದರೆ ನಾಗಣ್ಣ ಗುಡಿಯ ಆವರಣ ಸ್ವಚ್ಛ ಮಾಡುವುದರಿಂದ ಹಿಡಿದು ಎಲ್ಲ ಸಹಾಯವನ್ನೂ ಮಾಡಿ ಮಾಯಕ್ಕನಿಗೆ ಸಹಕಾರ ಕೊಡುತ್ತಿದ್ದ. ಕೆಲಸದಲ್ಲಿ ನಾಗಣ್ಣನ ಚಾಕಚಕ್ಯತೆ ನೋಡಿ ಮಾಯಕ್ಕನಿಗೂ ಅಚ್ಚರಿಯಾಗುತ್ತಿತ್ತು.



ಹೆಂಗಸರಿಗೆ ಮಾಯಕ್ಕ ಅಧ್ಯಕ್ಷಳಾಗಿದ್ದು ಒಂದು ರೀತಿಯಲ್ಲಿ ಬಲ ತಂದುಕೊಟ್ಟಿತ್ತು. ಮೊದಮೊದಲು ಹೆಂಗಸರ ಮಾತೆಂದರೆ ಮನೆಯಲ್ಲಿ ಕಾಲಕಸವಾಗಿತ್ತು. ಒಬ್ಬ ಹೆಂಗಸು ಪ್ರಮುಖ ಹುದ್ದೆಯಲ್ಲಿದ್ದಾಳೆಂದರೆ ಅದು ಊರಿನ ಎಲ್ಲ ಮನೆಗಳಲ್ಲಿ ಪರೋಕ್ಷ ಪ್ರಭಾವ ಬೀರುತ್ತಿರುವುದು ತಡವಾಗಿಯಾದರೂ ಗೋಚರಿಸತೊಡಗಿತು. ಮನೆಗಳಲ್ಲಿ ತಮ್ಮ ಮಾತು ನಡೆಯದೆ ಇದ್ದಾಗ ಮಾಯಕ್ಕಳನ್ನು ಕರೆದುಕೊಂಡು ಬಂದು ಹೇಳಿಸಿದ್ದೂ ಉಂಟು. ಪೂಜೆಪುನಸ್ಕಾರದ ಸಮಯದಲ್ಲಿ ಒಂದೊಂದು ಸಲ ಮಾಯಕ್ಕ ಎಲ್ಲ ಹೆಂಗಸರಿಗೂ ತನಗೆ ನಿಲುಕುವಂತೆ ಸೀರೆ ತಂದುಕೊಟ್ಟು ಅವರ ಪ್ರೀತ್ಯಾದರಗಳನ್ನು ಗಳಿಸಿದ್ದಳು. ಖರ್ಚು ಮಾಡಲು ಹಿಂದೆಮುಂದೆ ಮಾಡುತ್ತಿರಲಿಲ್ಲ.

'ದ್ಯಾವಪ್ಪನ ದುಡ್ಡು ತುಡುಗು ಮಾಡಿ ಇಟ್ಟಗೊಂಡಿದ್ಲು. ಅದನ್ನೇ ಖರ್ಚು ಮಾಡ್ತಾ ಇದಾಳೆ. ಆಕೆಯೇನು ತಾನೇ ಸ್ವತಃ ದುಡಿದಿದ್ದು ಅಲ್ಲವಲ್ಲ?' ಕೆಲವರು ಹಿಂದಿನಿಂದ ಹಂಗಿಸುತ್ತಿದ್ದರು. ಅಂತಹ ಮಾತುಗಳು ಕಿವಿಗೆ ಬಿದ್ದಾಗ ಮಾಯವ್ವನಿಗೆ ಬೇಸರವಾಗುತ್ತಿತ್ತು, ನಿಜ. ಆದರೆ ಟೀಕೆ ಹಂಗಿನ ಮಾತುಗಳನ್ನು ಆಕೆಗೆ ಧನಾತ್ಮಕವಾಗಿ ತೆಗೆದುಕೊಂಡು ರೂಢಿ. ಹೊಟೇಲು ದೇವಪ್ಪಂದು ಖರೆ. ಆದರ ಅಂವನ ಹೆಂಡತಿಯಾಗಿ ಬಂದ ಮ್ಯಾಲ ಅದರಾಗ ನಾ ದುಡಿದಿಲ್ಲೇನು? ಅದರೊಳಗ ನನ್ನ ಪಾಲು ಇಲ್ಲೇನು? ಅನಸೂಯಾ ಅಂವನ್ನ ಬಿಟ್ಟು ತವರುಮನೆಗೆ ಹೋದ ಮೇಲೆ ದೇವಪ್ಪ ಬೈಲಹೊಂಗಲದ ಮತ್ತೊಂದು ಹೊಟೇಲಿನಲ್ಲಿ ದುಡಿಲಿಕ್ಕೆ ಇದ್ದನಲ್ಲ. ತಾನೇ ಬಂದ ಮೇಲೆ ಅಲ್ಲವೆ ಈ ಹೊಟೇಲು ಮತ್ತೆ ಹೆಸರು ಮಾಡಿದ್ದು? ಗಿರಾಕಿಗಳಿಗೆ ಉಪ್ಪಿಟ್ಟು, ಅವಲಕ್ಕಿ, ಚಹಾ, ಗಿರಮಿಟ್ ಯಾರು ಮಾಡಿಕೊಟ್ಟರು? ತಟ್ಟೆಗಳನ್ನು ಯಾರು ತೊಳೆದರು? ವಾರಕ್ಕೆ ಒಂದೆರಡು ದಿನ ಬೇರೆಯವರ ಹೊಲಗಳಿಗೆ ಹೋಗಿ ಕೂಲಿಯಾಳಾಗಿ ದುಡಿದು ಬಂದೆನಲ್ಲ? ಇದೆಲ್ಲದರ ಲೆಕ್ಕ ಯಾರು ಕೊಡುತ್ತಾರೆ? ತನ್ನ ಬಗ್ಗೆ ಆಡಿಕೊಳ್ಳುವವರನ್ನು ಪ್ರಶ್ನಿಸಬೇಕೆಂದು ಅವಳಿಗೆ ಅನೇಕ ಸಲ ಅನಿಸುತ್ತಿತ್ತು. ತುಟಿಯವರೆಗೂ ಬಂದ ಮಾತನ್ನು ತುಟಿದಾಟಗೊಡುತ್ತಿರಲಿಲ್ಲ. 'ನಾನು ನನ್ನ ಮಾತನ್ನು ಒಳಗೆ ಇಟ್ಟುಕೊಂಡು ದೊಡ್ಡವಳಾಗ್ತೇನಿ. ಅವನು ನನ್ನ ಬಗ್ಗೆ ಆಡಿಕೊಂಡು ಸಣ್ಣವರಾಗಲಿ!'

'ದ್ಯಾಮವ್ವನಿಗೆ ಒಂದು ಪೂಜೆ ಮಾಡಿಸೋಣ, ಅದರ ಎಲ್ಲ ಖರ್ಚನ್ನ ನಾ ಕೊಡ್ತೀನಿ.' ಪಂಚಾಯಿತಿಯಲ್ಲಿ ಹೇಳಿ ಎಲ್ಲ ಖರ್ಚನ್ನೂ ತಾನೇ ವಹಿಸಿಕೊಂಡಳು. ಊರಿನ ಜನರಿಗೆಲ್ಲ ಮುಂಜಾನೆ ಉಪ್ಪಿಟ್ಟು, ಚಹಾ, ಮಧ್ಯಾಹ್ನದ ಊಟ ಎಲ್ಲವೂ ಸಿದ್ಧವಾಯಿತು. ಅಡುಗೆಯವರಿಗೆ ಹೇಳುವ ಪ್ರಸಂಗ ಬಂದಾಗ 'ದೇವಪ್ಪಗ ಮಾಡಾಕ ಹೇಳ್ರಿ. ದ್ಯಾಮವ್ವನ ಸೇವಾ ಮಾಡಲಿಕ್ಕೆ ಅಧ್ಯಕ್ಷರು ಹೇಳ್ಯಾರು ಅಂತ ಹೇಳ್ರಿ. ಅಂವನು ಮಾಡಾಕ ಒಪ್ಪಲಿಲ್ಲಂದ್ರ ಬ್ಯಾರೆಯವರಿಗೆ ಹೇಳೋಣ', ಅವಳ ಮಾತಿಗೆ ಎಲ್ಲರೂ ನಕ್ಕರು. ಹೆಂಡತಿಯಾಗಿದ್ದವಳು ಇಷ್ಟೊಂದು ಅಧಿಕಾರಯುತವಾಗಿ ಮತ್ತು ಅಷ್ಟೇ ಪ್ರೀತಿಯಿಂದ ದೇವಪ್ಪನಿಗೆ ಹೇಳುತ್ತಿರುವುದು ಅವರಿಗೆ ವಿಸ್ಮಯ ತರಿಸಿತು. ವಿಚ್ಛೇದನದ ನಂತರವೂ ಕಲಹವಿಲ್ಲದೆ ಸ್ನೇಹದಿಂದಿರುವುದು ಅವರಿಗೆ ಆಶ್ಚರ್ಯದ ಸಂಗತಿ. ಶಿವಣ್ಣನನ್ನೂ ದೇವಪ್ಪ ಪ್ರೀತಿಯಿಂದಲೆ ಮಾತನಾಡಿಸುತ್ತಾನೆ. ಅಧ್ಯಕ್ಷರು ಅಡುಗೆ ಮಾಡಲು ಹೇಳಿದ್ದಾರೆ ಎಂದಾಗ ದೇವಪ್ಪ ಒಂದೇ ಮಾತಿಗೆ ಒಪ್ಪಿಕೊಂಡ. 'ಪಂಚಾಯಿತಿ ಮೇಡಮ್ಮಾರು ಹೇಳಿದ ಮ್ಯಾಲ ಹೆಂಗ ಒಲ್ಲೆ ಅನ್ನಲಿಕ್ಕಾಗ್ತದ? ಅವರು ಸಂತಿ ರೊಕ್ಕ ಅಷ್ಟೇ ಕೊಡಲಿ. ಅಡಿಗಿ ಮಾಡಿದ ಕೂಲಿ ಕೊಡೋದುಬ್ಯಾಡ. ದ್ಯಾಮವ್ವಗೂ ನಂದೂ ಸೇವಾ ಇರಬೇಕಲ್ಲ ಮತ್ತೆ?' ಎಲ್ಲರೂ ನಕ್ಕರು. ಹಿಂದೆ ಗಂಡಹೆಂಡತಿ ಆಗಿದ್ದವರು ತಮ್ಮಲ್ಲಿ ಯಾವುದೆ ಮನಸ್ತಾಪ ಇಟ್ಟುಕೊಳ್ಳದೆ ಎಷ್ಟು ಚೆಂದ ಮಾತಾಡುತ್ತಾರೆ, ನಕ್ಕು ನಲಿಯುತ್ತಾರೆ!

ಸೋಮಣ್ಣನ ಕೊಂಕು ಎಲ್ಲದರಲ್ಲಿಯೂ ಇರುವುದು. 'ಇತ್ತೀಚೆಗೆ ಹೆಂಗಸರು ಗಂಡಸರಿಗೆ ಅಡಗಿ ಮಾಡ್ರಿ ಅಂತ ಆರ್ಡರ್ ಮಾಡಾಕ ಸುರು ಮಾಡ್ಯಾರ. ಅಲ್ಲೋ ದ್ಯಾವಣ್ಣ, ಆಕಿ ಕೂಡಿದ ಮಂದಿಯೊಳಗ ನಿನಗ ಆರ್ಡರ್ ಮಾಡ್ತಾಳಂದ್ರ ಏನಿದು? ದ್ಯಾವಪ್ಪ ನೀನು ಒಪ್ಪಕೊಬ್ಯಾಡ.' ಸೋಮಣ್ಣ ಹೊಟ್ಟೆಕಿಚ್ಚಿಗೆ ಆಡಿಕೊಳ್ಳುತ್ತಾನೆಂದು ದೇವಪ್ಪನಿಗೆ ಗೊತ್ತು. ಆತ ಅಡುಗೆಯನ್ನು ಮತ್ತಷ್ಟು ರುಚಿಕಟ್ಟಾಗಿ ಮಾಡಿ ದೇವಿಗೆ ಗೋಧಿ ಹುಗ್ಗಿಯ ನೈವೇದ್ಯ ಮಾಡಿದ. ದ್ಯಾವಪ್ಪ ಮಾಡಿದ ಹುಗ್ಗಿಗೆ ಎಲ್ಲರೂ ಹಿಗ್ಗಿದರು. ಚಪಾತಿ ಲಟ್ಟಿಸುತ್ತಿದ್ದವರ ಹತ್ತಿರ ಬಂದ ಮಾಯಕ್ಕ ತಾನು ಸ್ವಲ್ಪ ಹೊತ್ತು ಕುಳಿತಂತೆ ಮಾಡಿ ಒಂದೆರಡು ಚಪಾತಿ ಲಟ್ಟಿಸಿ, ಕಾದಿದ್ದ ಹಂಚಿನ ಮೇಲೆ ಹಾಕಿ, ಚಪಾತಿಗೆ ತುಸು ಎಣ್ಣೆ ಸವರಿ, ಅದನ್ನು ಹೊರಳಿಸಿ ಹಾಕಿದಾಗ ಕೂಡಿದ ಮಂದಿ ಕೇಕೆ ಹೊಡೆಯಿತು. ಚಪಾತಿಯನ್ನು ಹೊರಳಿಸಿ ತೆಗೆಯುತ್ತಿರುವ ಫೋಟೊವನ್ನು ಫೋಟೊಗ್ರಾಫರ್ ಎಷ್ಟು ಚೆಂದ ತೆಗೆದಿದ್ದಾನೆ. ದೂರದಿಂದ ನೋಡಿದಾಗ ಉರಿಯುವ ಜ್ವಾಲೆಯಲ್ಲಿ ಆಕೆ ಕೈಹಾಕುತ್ತಿರುವಂತೆ, ಅದನ್ನು ಸಂಭಾಳಿಸುತ್ತಿರುವಂತೆ ತೋರುತ್ತದೆ. ಹೆಸರುಬೇಳೆ, ಎಳೆ ಮೆಕ್ಕೆಜೋಳ, ಎಳೆಸವತಿಕಾಯಿ, ಸಣ್ಣಗೆ ಸೂಸಿದ ಹಸಿಕೊಬ್ಬರಿ ಹಾಕಿ ಮಾಡಿದ ಕೋಸಂಬರಿ; ಗುರೆಳ್ಳು ಹಾಕಿ ಮಾಡಿದ ಬದನೆಕಾಯಿ ಪಲ್ಲೆ; ಯಾಲಕ್ಕಿ ಪರಿಮಳದ ಹುಗ್ಗಿ. ಉಂಡ ಜನರು ಸಂಪ್ರೀತರಾದರು. ಯಾಲಕ್ಕಿಯ ಪರಿಮಳ ಸೋಮಣ್ಣನ ಮೂಗಿಗೂ ಬಡಿಯದಿರಲಿಲ್ಲ. ಅಡುಗೆಯ ಕೂಲಿ ದೇವಪ್ಪ ಒಲ್ಲೆಯೆಂದಾಗ ಮಾಯಕ್ಕ ಮುಗುಳ್ನಕ್ಕು ವಂದಿಸಿದಳು. ಅವಳ ಸ್ವಾತಂತ್ರ್ಯ ಮತ್ತು ಅವಳ ಆಯ್ಕೆಯನ್ನು ಗೌರವಿಸಿದ ಪ್ರತಿಯಾಗಿ ಈ ಮುಗುಳ್ನಗೆ ಹಾಗೂ ಕೃತಜ್ಞತೆ ಇತ್ತೇನೊ?

'ಮಾಯಕ್ಕ, ಈ ಪೂಜೆಪುನಸ್ಕಾರ ಮಾಡಿದ್ದಕ್ಕ ಒಂದು ರೀತಿ ಮನಸ್ಸಿಗೆ ಸಂತೋಷ ಅನ್ನಿಸ್ತು ನೋಡು.' ಸಾಂವಕ್ಕ ಹೇಳಿದಳು. ಆಕೆಗೂ ಕೂಡಿದ ಮಂದಿಗೂ ಹೇಳುವಂತೆ ಗ್ರಾಮದೇವತೆಗಳನ್ನು ಮಾಯಕ್ಕ ನೆನೆಸಿಕೊಂಡಳು.

'ಈ ದೇವರು ದಿಂಡರು ನಮ್ಮ ನೆಲಮೂಲ ಸಂಸ್ಕೃತಿಯೊಳಗ ಬೆರೆತುಹೋಗ್ಯಾವ. ಜಾತ್ರಿ ಅಂದ್ರೆ ಬರೀ ಜಾತ್ರಿ ಅಷ್ಟೇ ಅಲ್ಲ. ಎಲ್ಲಾ ಜನ ತಮ್ಮ ತಮ್ಮ ಜಾತಿ, ಮತ, ಅಂತಸ್ತು ಮರೀಬೇಕು, ಬೆರೀಬೇಕು ಅನ್ನೂವಂತಹ ತತ್ವ ಇದರೊಳಗ ಇರ್ತದ. ನಾನು ನೀವು ಎಲ್ಲಾರೂ ಸೇರಿ ಈ ಜಗತ್ತನ್ನು ಸೃಷ್ಟಿ ಮಾಡಿದಂಥ ದೈವವನ್ನು ಕೇಳಲಿಕ್ಕೆ ಹತ್ತೇವಿ. ಮುಗಿಲ ಮಾದೇವನ್ನ ಯಾಕ ಕೇಳ್ತೇವಿ ಹೇಳ್ರಿ? ಅಂವ ಮಣಗಟ್ಟಲೆ ಕೊಡ್ತಾನಂತ. ಗಿರಿಯೊಳಗ ಕುಂತಿರುವಂಥ ಗಿರಿಮಲ್ಲ ಕೊಟ್ಟಾಗ ಮನಿನೂ ತುಂಬತಾವು, ಮನಸ್ಸೂ ತುಂಬತಾವ. ಅಲ್ಲ?' ಗುಡಿಯ ಗಂಟೆಯ ಶಬ್ದಕ್ಕೆ ಮಾಯಕ್ಕ ಬಾಯಲ್ಲಿನ ಗೀತೆ ಗುಣುಗುಣಿಸಿದಳು.

(ಸಶೇಷ)